ಓ ಎಸ್ ನಂ.37/2025
ಪಿ.ಡಬ್ಲ್ಯೂ-1 ಶಿವಯೋಗೆಪ್ಪ ತಂದೆ ಶರಣಪ್ಪ ಮೂಗಿನ

**(ಇಂದು ದಿನಾಂಕಃ 22-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಖ್ಯ ವಿಚಾರಣೆಃ ಶ್ರೀ ಡಿ ಎಂ ಡಿ ವಕೀಲರಿಂದ.

ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ನನ್ನ ಹೇಳಿಕೆಯ ಮೇರೆಗೆ ಅದನ್ನು ದಾಖಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದ ಕೂಡಿರುತ್ತವೆ ಎಂದು ಪ್ರಮಾಣಿಕರಿಸಿರುತ್ತೇನೆ.

ನಾನು ಪಹಣಿಗಳ ದೃಡಿಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-೧ ಮತ್ತು ೨ ಎಂದು ಗುರುತಿಸಲಾಯಿತು.

ನಾನು ಪಹಣಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-೩ ರಿಂದ ನಿಪಿ-೮ ಎಂದು ಗುರುತಿಸಲಾಯಿತು.

ನಾನು ಪಹಣಿಗಳ ದೃಡಿಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-೯ ಮತ್ತು ೧೦ ಎಂದು ಗುರುತಿಸಲಾಯಿತು.

ನಾನು ಪಹಣಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-೧೧ ಎಂದು ಗುರುತಿಸಲಾಯಿತು.

ನಾನು ದಿನಾಂಕ 27-03-2024 ರ ಖರೀದಿ ಪತ್ರದ ಆನಲೈನ ದೃಡಿಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-೧೨ ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಶ್ರೀ ಆರ್ ಎಂ ಜಿ ವಕೀಲರಿಂದ.

ನಾನು ಪಾಲು ಕೇಳಿ ಈ ದಾವೆಯನ್ನು ಹಾಕಿರುತ್ತೇನೆ. ನಮ್ಮ ಕುಟುಂಬಕ್ಕೆ ಸರ್ವೆ ನಂಬರ ೮೦ ರಲ್ಲಿ ೨೦ ಎಕರೆ ೨೦ ಗುಂಟೆ, ಸರ್ವೆ ನಂಬರ ೮೧ ರಲ್ಲಿ ೬ ಎಕರೆ ೨೦ ಗುಂಟೆ ಜಮೀನು ಮತ್ತೊಂದು ಸರ್ವೆ ನಂಬರ ೩೪ ರಲ್ಲಿ ೧ ಎಕರೆ ಜಮೀನು ಈ ರೀತಿ ೩ ಜಮೀನುಗಳು ಇರುತ್ತವೆ. ಈ ದಾವೆಯಲ್ಲಿ ನಾನು ಸರ್ವೆ ನಂಬರ ೩೪ ರ ೧ ಎಕರೆ ಜಮೀನನ್ನು ತೋರಿಸಿಲ್ಲ ಎಂದರೆ ಸರಿ. ಸಾಕ್ಷಿಯು ಅದು ನಮ್ಮ ತಂದೆಯ ಹೆಸರಿನಲ್ಲಿರುತ್ತದೆ ಎನ್ನುತ್ತಾರೆ. ನಮ್ಮ ತಂದೆ ಈಗ ಮೃತರಾಗಿರುತ್ತಾರೆ ಎಂದರೆ ಸರಿ. ೧೯೮೫ ರಲ್ಲಿ ನಮ್ಮ ತಂದೆ ನಮಗೆಲ್ಲ ಪಾಲು ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮಗೆ ಮನೆಗಳೂ ಕೂಡಾ ಇರುತ್ತವೆ. ಈ ದಾವೆಯಲ್ಲಿ ಸದರಿ ಮನೆಗಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ೧೯೮೫ ರಲ್ಲಿ ನಮ್ಮ ತಂದೆಯವರು ಜೀವಿತಾ ಇದ್ದಾಗ ಪಾಲು ಆಗಿ, ಅದರಂತೆ ಸರ್ವೆ ನಂಬರ ೮೦ ರಲ್ಲಿ ೪ ಎಕರೆ ೨೦ ಗುಂಟೆ ನನ್ನ ಪಾಲಿಗೆ ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಸರ್ವೆ ನಂಬರ ೮೧ ರಲ್ಲಿ ನನಗೆ ೬ ಎಕರೆ ೨೦ ಗುಂಟೆ ಜಮೀನು ಪಾಲಿಗೆ ಬಂದಿದೆ ಎನ್ನುತ್ತಾರೆ. ೧೯೮೫ ರಲ್ಲಿ ಸದರಿ ಪಾಲು ಆಗಿದೆ ಎಂದರೆ ಸರಿಯಲ್ಲ.

೨. ೨ನೇ ಪ್ರತಿವಾದಿ ಶ್ರೀಶೈಲರವರು ತಮ್ಮ ಪಾಲಿಗೆ ಬಂದ ಜಮೀನಿನಲ್ಲಿ ೩ ಎಕರೆ ೩೯ ಗುಂಟೆ ಜಮೀನನ್ನು ೬ನೇ ಪ್ರತಿವಾದಿ ಮಲ್ಲಮ್ಮರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ೪ನೇ ಪ್ರತಿವಾದಿ ಮಹಾಂತಪ್ಪರವರು ನನ್ನ ಮೇಲೆ ದಾವೆ ಹೂಡಿದ್ದರಿಂದ ನಾನು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಜೀವಿತಾ ಇರುವಾಗಲೆ ನಮಗೆಲ್ಲ ಪಾಲು ಮಾಡಿ ಕೊಟ್ಟಿದ್ದರೂ ಸಹ ಮತ್ತು ನಮ್ಮ ನಡುವೆ ಈಗಾಗಲೆ

ಪಾಲು ಆಗಿದ್ದರೂ ಸಹ ನಾನು ಈ ಒಂದು ಸುಳ್ಳು ದಾವೆಯನ್ನು ಸಲ್ಲಿಸಿ, ಒಂದು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.